**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.43-2018

ದೋ.ಸಾ. 11
ಫ್ರಾ.ಸಾ. 5
ಪ್ರ.ವ.ಬೊ.ದಿನಾಂಕ. 22-11-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಶಾಂತಲಿಂಗಪ್ಪ |
| ತಂದೆ / ಗಂಡನ ಹೆಸರು | - | ರೇವಣಸಿದ್ದಪ್ಪ |
| ವಯಸ್ಸು | - | 70 |
| ಉದ್ಯೋಗ | - | ವ್ಯವಸಾಯ |
| ವಾಸ ಸ್ಥಳ | - | ಮೆಳ್ಳೆಕಟ್ಟೆ ಗ್ರಾಮ, ಅಣಜಿ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ.16 ನನ್ನ ತಮ್ಮ. ಫ್ರಾ.ಸಾ.4 ನನ್ನ ತಮ್ಮನ ಹೆಂಡತಿ. ಚಾ.ಸಾ.16 ರವರು ಈಗ ತೀರಿಕೊಂಡಿರುತ್ತಾರೆ. ಅವರಿಗೆ ಇಬ್ಬರು ಮಕ್ಕಳು ಇದ್ದು, ಅವರಲ್ಲಿ ಓರ್ವ ಫ್ರಾ.ಸಾ.3 ಹಾಗೂ ಇನ್ನೋರ್ವಳು ಮೃತ ಕುಸುಮ ಆಗಿರುತ್ತಾಳೆ. ನಾನು ಈ ಮೊದಲು ಹಳ್ಳಿಯಲ್ಲಿ ಮೆಕ್ಕೆ ಜೋಳ ವ್ಯಾಪಾರವನ್ನು ಮಾಡುತ್ತಿದ್ದೆ. ನಾನು ಸುತ್ತಮುತ್ತಲಿನ ಹಳ್ಳಿಯಲ್ಲಿ ವ್ಯಾಪಾರ ಮಾಡುತ್ತಿರುವಾಗ ನನಗೆ ಚಾ.ಸಾ.18 ರವರ ಪರಿಚಯ ಆಗಿರುತ್ತದೆ. ಆ ಸಮಯದಲ್ಲಿ ಚಾ.ಸಾ.18 ರವರು ತಮಗೆ ಓರ್ವ ಗಂಡು ಹುಡುಗನ ಪರಿಚಯ ಇದ್ದು, ಹೆಣ್ಣು ಇದ್ದಲ್ಲಿ ಹೇಳಿ ಎಂದು ಹೇಳಿರುತ್ತಾರೆ. ಆಗ ನಾನು ನನ್ನ ತಮ್ಮನ ಬಳಿ ಮಾತನಾಡಿ ತಿಳಿಸುತ್ತೇನೆ ಎಂದು ಆತನ ಬಳಿ ಹೇಳಿರುತ್ತೇನೆ.

ನಂತರ ಈ ಕುರಿತು ಮಾತನಾಡಿ ಚಾ.ಸಾ.18 ರವರು ನನ್ನ ತಮ್ಮನ ಮಗಳನ್ನು ನೋಡಿ ಮಾತನಾಡುತ್ತೇವೆ ಎಂದು ಹೇಳಿರುತ್ತಾರೆ. ಆ ಸಮಯದಲ್ಲಿ ಚಾ.ಸಾ.18 ರವರು ಅವರ ಮನೆಯ ಪಕ್ಕದ ನಿವಾಸಿಯಾದ 2 ನೇ ಆರೋಪಿತನ ಮಗನಾದ 1 ನೇ ಆರೋಪಿಯ ಕುರಿತು ಕುಸುಮಾಳನ್ನು ನೋಡಲು ಬರುತ್ತೇವೆ ಎಂದು ಹೇಳಿರುತ್ತಾರೆ. ನಂತರ ನಾನು ನನ್ನ ತಮ್ಮನ ಬಳಿ ವಿಷಯ ತಿಳಿಸಿದ್ದು, ಆತ ಅವರು ನೋಡಲು ಬರಲು ತಿಳಿಸಿರುತ್ತಾನೆ. ನಂತರ 1 ಮತ್ತು 2 ನೇ ಆರೋಪಿತರು ಮತ್ತು ಅವರ ಕಡೆಯ ಸಂಬಂಧಿಕರು ಸೇರಿಕೊಂಡು ನನ್ನ ತಮ್ಮನ ಮನೆಗೆ ಕುಸುಮಾಳನ್ನು ನೋಡಲು ಬಂದಿರುತ್ತಾರೆ. ಆ ಸಮಯದಲ್ಲಿ ಅವರಿಗೆ ಕುಸುಮಾಳು ಒಪ್ಪಿಗೆಯಾಗಿದ್ದು, ನಂತರ ನಾವು 1 ನೇ ಆರೋಪಿಯ ಮನೆಯನ್ನು ನೋಡಲು ಹೋಗಿರುತ್ತೇವೆ. ನಂತರ ನಮಗೆ ಆರೋಪಿತರ ಕುರಿತು ಒಪ್ಪಿಗೆಯಾಗಿರುತ್ತದೆ. ಆ ರೀತಿ ಒಪ್ಪಿಗೆಯಾದ ಬಳಿಕ ಆರೋಪಿತರು ಮಾತುಕತೆಗೆ ಬರಲು ಹೇಳಿರುತ್ತಾರೆ. ಆ ಸಂದರ್ಭದಲ್ಲಿ ನಾನು, ನನ್ನ ಇಬ್ಬರು ತಮ್ಮಂದಿರು, ಶಿವಮೂರ್ತಪ್ಪ, ಶೇಖರಪ್ಪ, ಸಿದ್ದಪ್ಪ ಸೇರಿ ಹೋಗಿರುತ್ತೇವೆ. ನಾವು ಆರೋಪಿತರ ಮನೆಗೆ ಹೋದಾಗ ಅಲ್ಲಿ ಆರೋಪಿತರು ಅವರ ಸಂಬಂಧಿಕರು ಹಾಗೂ ಚಾ.ಸಾ.18 ರವರು ಕೂಡ ಇದ್ದರು.

ಆ ಸಮಯದಲ್ಲಿ 2 ನೇ ಆರೋಪಿಯು ವರದಕ್ಷಿಣೆ ಬೇಕು ಎಂದು ಕೇಳಿರುತ್ತಾನೆ. ಆ ಸಮಯದಲ್ಲಿ ಆರೋಪಿತರು 30 ತೊಲ ಬಂಗಾರ, ಮೂರು ಲಕ್ಷ ಹಣ ಹಾಗೂ ಒಂದು ಬೈಕಿನ ಕುರಿತು 60 ಸಾವಿರ ಹಣ

ಹಾಗೂ ಖರ್ಚನ್ನು ಹಾಕಿ ಮದುವೆ ಮಾಡಿಕೊಡಬೇಕು ಎಂದು ಕೇಳಿರುತ್ತಾರೆ. ಆಗ ನಾವು 25 ತೊಲ ಬಂಗಾರ, ಎರಡೂವರೆ ಲಕ್ಷ ಹಣ ಹಾಗೂ ಬೈಕು ಖರೀದಿಸಲು ಹಣ ಮತ್ತು ಮದುವೆ ಖರ್ಚನ್ನು ಹಾಕಿಕೊಂಡು ಮದುವೆ ಮಾಡಿ ನೀಡುತ್ತೇವೆ ಎಂದು ಹೇಳಿರುತ್ತೇವೆ. ಅದಕ್ಕೆ ಆರೋಪಿತರು ಒಪ್ಪಿಕೊಂಡಿರುತ್ತಾರೆ. ನಂತರ ಅವರಿಬ್ಬರ ಮದುವೆಯು ದಾವಣಗೆರೆಯ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ನಡೆದಿರುತ್ತದೆ. ಆ ಸಮಯದಲ್ಲಿ ಬಂಗಾರದ ವಡವೆಗಳನ್ನು ಮಾಡಿಸಿ ನೀಡಿದ್ದಲ್ಲದೇ, ಎರಡೂವರೆ ಲಕ್ಷ ಹಣವನ್ನು ಮತ್ತು ಬೈಕು ಖರೀದಿಸಲು 65 ಸಾವಿರ ಹಣವನ್ನು ನೀಡಿರುತ್ತೇವೆ. ನಾವು ನೀಡಿದ 65 ಸಾವಿರ ಹಣದಲ್ಲಿ 1 ನೇ ಆರೋಪಿ ಬೈಕು ಖರೀದಿಸಿರುತ್ತಾನೆ. ಅ ಸಮಯದಲ್ಲಿ ಬಂಗಾರದ ದಾಗಿನುಗಳಾದ ಸರ, ಬಳೆ, ತಾಳಿ ಹಾಗೂಾ ಇತರೆ ದಾಗಿನುಗಳನ್ನು ಮಾಡಿಸಲಾಗಿದ್ದು, ಆಗ 5 ತೊಲ ಹೆಚ್ಚಿಗೆ ದಾಗಿನುಗಳಾಗಿದ್ದು, ಅವುಗಳನ್ನು ಕೂಡ ನಾವು ಕುಸುಮಾಳಿಗೆ ಹಾಕಿ ಮದುವೆ ಮಾಡಿ ನೀಡಿರುತ್ತೇವೆ.

ಮದುವೆಯಾದ ಬಳಿಕ ಮೃತ ಕುಸುಮಾ ಆರೋಪಿತರ ಮನೆಗೆ ಹೋಗಿ ವಾಸವಾಗಿದ್ದು, ಅಲ್ಲಿ ಆರೋಪಿತರು ಹಾಗೂಾ 2 ನೇ ಆರೋಪಿಯ ತಾಯಿ ಕೂಡ ವಾಸವಾಗಿದ್ದರು. ಮದುವೆಯಾಗಿ ಹೋದ ಬಳಿಕ ಆರೋಪಿತರು ಮೃತ ಕುಸುಮಾಳನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ನಂತರ ಆಕೆಗೆ ಆರೋಪಿತರು ಹಾಗೂ 2 ನೇ ಆರೋಪಿಯ ತಾಯಿಯು ಸೇರಿಕೊಂಡು ವರದಕ್ಷಿಣೆ ನೀಡಿರುವುದು ಕಡಿಮೆಯಾಗಿದೆ ಎಂದು ಹೇಳಿ ಕಿರುಕುಳ ನೀಡಲು ಆರಂಭಿಸಿರುತ್ತಾರೆ. ಆ ಸಮಯದಲ್ಲಿ ಮೃತ ಕುಸುಮಾ ಒಂದೆರಡು ಬಾರಿ ನಮ್ಮ ಮನೆಗೆ ಬಂದು ಆಕೆಗೆ ನೀಡುತ್ತಿದ್ದ ವರದಕ್ಷಿಣೆ ಕಿರುಕುಳದ ಕುರಿತು ಹೇಳಿರುತ್ತಾಳೆ. ನಂತರ ನಾನು, ನನ್ನ ತಮ್ಮ, ನನ್ನ ತಮ್ಮನ ಮಗ ಸೇರಿಕೊಂಡು ಎರಡು ಬಾರಿ ಆರೋಪಿತರ ಮನೆಗೆ ಹೋಗಿ ಈ ಕುರಿತು ಅವರಲ್ಲಿ ಮಾತನಾಡಿ ಬಂದಿರುತ್ತೇವೆ. ಆ ಸಮಯದಲ್ಲಿ ಆರೋಪಿತರಿಗೂ ಹಾಗೂ ಕುಸುಮಾಳಿಗೂ ನಾವು ಈ ರೀತಿ ಆಗಬಾರದು, ಹೊಂದಿಕೊಂಡು ಹೋಗಿ ಎಂದು ಹೇಳಿ ಬಂದಿರುತ್ತೇವೆ. ಆ ರೀತಿ ನಾವು ಹೇಳಿ ಬಂದಿದ್ದರೂ ಕೂಡ ಆರೋಪಿತರು ಅದೇ ತರನಾಗಿ ಆಕೆಗೆ ಕಿರುಕುಳ ನೀಡುತ್ತ ಮುಂದುವರೆದಿರುತ್ತಾರೆ.

ನಂತರ ಸಾಯುವ ಒಂದು ದಿನದ ಮೊದಲು ಕುಸುಮಾಳು ರಾತ್ರಿ ಫ್ರಾ.ಸಾ.3 ರವರಿಗೆ ದೂರವಾಣಿ ಮಾಡಿ ತನಗೆ ತುಂಬಾ ತೊಂದರೆ ನೀಡುತ್ತಿದ್ದಾರೆ ಬಂದು ಕರೆದುಕೊಂಡು ಹೋಗಿ ಎಂದು ತಿಳಿಸಿರುತ್ತಾಳೆ. ಈ ವಿಷಯವನ್ನು ನನಗೆ ಫ್ರಾ.ಸಾ.3 ರವರು ದೂರವಾಣಿ ಮಾಡಿ ತಿಳಿಸಿರುತ್ತಾರೆ. ಆಗ ನಾನು ಆತನಲ್ಲಿ ಮರುದಿನ ಸಾಯಂಕಾಲ ಹೋಗಿ ಮಾತನಾಡೋಣ ಎಂದು ಹೇಳಿರುತ್ತೇನೆ. ನಂತರ ಮರುದಿನ ಬೆಳಿಗ್ಗೆ 11-30 ಯಿಂದ 12-00 ಗಂಟೆ ಸಮಯದಲ್ಲಿ ಫ್ರಾ.ಸಾ.3 ರವರು ನನಗೆ ಪುನಃ ದೂರವಾಣಿ ಮಾಡಿ ಕುಸುಮಾ ತೀರಿಕೊಂಡಿದ್ದಾಳೆ, ಏನೋ ಮಾಡಿಕೊಂಡಿದ್ದಾಳೆ ಎಂದು 1 ನೇ ಆರೋಪಿ ತಿಳಿಸಿದ್ದಾನೆ ಎಂದು ನನಗೆ ತಿಳಿಸಿರುತ್ತಾನೆ. ಆ ರೀತಿ ತಿಳಿಸಿದ ಬಳಿಕ ನಾನು, ನನ್ನ ಇಬ್ಬರು ತಮ್ಮರು, ಫ್ರಾ.ಸಾ.3 ಹಾಗೂ ನಮ್ಮ ಹತ್ತಿರದ ಸಂಬಂಧಿಕರು ಸೇರಿಕೊಂಡು ಆರೋಪಿತರ ಮನೆಗೆ ಹೋಗಿರುತ್ತೇವೆ. ನಾವು ಅಲ್ಲಿ ಹೋಗಿ ನೋಡಿದಾಗ ಸದರಿ ಮನೆಯ 1 ನೇ ಮಹಡಿಯಲ್ಲಿ ಮೃತ ಕುಸುಮಾಳ ಶವವು ನೆಲದ ಮೇಲೆ ಬಿದ್ದಿದ್ದು, ಕುತ್ತಿಗೆಗೆ ಸೀರೆ ಸುತ್ತಿಕೊಂಡಿದ್ದು, ಆಕೆಯ ಎಡಕಿವಿಯಿಂದ ರಕ್ತ ಬರುತ್ತಿತ್ತು. ನಾವು ಆಗ ಅಲ್ಲಿ ನೋಡಿದಾಗ ಸದರಿ ಮನೆಯಲ್ಲಿ ಆರೋಪಿತರು ಯಾರು ಇರಲಿಲ್ಲ. ಸದರಿ

ಕುಸುಮಾಳ ಶವವನ್ನು ಗಮನಿಸಿದಾಗ ನಮಗೆ ಅವಳಿಗೆ ಹೊಡೆದ ಕಾರಣ ತೀರಿಕೊಂಡಿದ್ದಾಳೆ ಎಂದು ತಿಳಿದುಬಂದಿರುತ್ತದೆ. ಅಲ್ಲದೇ ನಂತರ ಪೋಲೀಸರು ಅಲ್ಲಿಗೆ ಬಂದು ನೋಡಿರುತ್ತಾರೆ.

ಅಲ್ಲದೇ ಆ ಸಮಯದಲ್ಲಿ ಫ್ರಾ.ಸಾ.3 ರವರು ಪೋಲೀಸರಿಗೆ ದೂರನ್ನು ಕೂಡ ಸಲ್ಲಿಸಿರುತ್ತಾರೆ. ನಂತರ ಮೃತಳ ಶವವನ್ನು ದಾವಣಗೆರೆಯ ಬಾಪೂಜಿ ಆಸ್ಪತ್ರೆಗೆ ತೆಗೆದುಕೊಂಡು ಬಂದಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ತಹಶೀಲ್ದಾರರು ಬಂದು ಶವ ಪರೀಕ್ಷೆ ಮಾಡಿರುತ್ತಾರೆ. ಆಗ ತಹಶೀಲ್ದಾರರು ನನ್ನನ್ನು ವಿಚಾರಿಸಿದ್ದು, ನಾನು ಅವರಿಗೆ ಹೇಳಿಕೆ ನೀಡಿರುತ್ತೇನೆ. ನಂತರ ಶವವನ್ನು ವೈದ್ಯರ ಪರೀಕ್ಷೆಗಾಗಿ ಕಳುಹಿಸಿಕೊಡಲಾಗಿರುತ್ತದೆ. ಶವ ಪರೀಕ್ಷೆ ಆದ ಬಳಿಕ ಶವವನ್ನು ಪುನಃ ಆರೋಪಿತರ ಮನೆಗೆ ತೆಗೆದುಕೊಂಡು ಬರಲಾಗಿರುತ್ತದೆ. ನಂತರ ಪೋಲೀಸರು ಈ ಕುರಿತು ನಮ್ಮನ್ನು ವಿಚಾರಿಸಿರುತ್ತಾರೆ. ನಂತರ ಶವವನ್ನು ಗಾಂಧಿನಗರದಲ್ಲಿಯೇ ಅಂತ್ಯ ಸಂಸ್ಕಾರ ಮಾಡಲಾಗಿರುತ್ತದೆ.

ನಾವು ಸದರಿ ದಿನ ಶವ ನೋಡಿದಾಗ ಆಕೆಯ ಕುತ್ತಿಗೆಗೆ ಸೀರೆ ಸುತ್ತಿರುವುದನ್ನು ನೋಡಿರುವುದಾಗಿ ಹೇಳಿದ್ದು, ಅದನ್ನು ಪುನಃ ನೋಡಿದರೆ ಗುರುತಿಸುತ್ತೇನೆ. ನಾವು ಕುಸುಮಾಳಿಗೆ ಹಾಕಿಕೊಟ್ಟಿರುವ ಬಂಗಾರದ ದಾಗಿನುಗಳನ್ನು ಕೂಡ ನೋಡಿದರೆ ಗುರುತಿಸುತ್ತೇನೆ. ಅಲ್ಲದೇ 1 ನೇ ಆರೋಪಿಯು ಖರೀದಿಸಿದ ಮೋಟಾರ್ ಸೈಕಲನ್ನು ಕೂಡ ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಬಂಗಾರದ ದಾಗಿನುಗಳು ಟ್ರಜರಿಯಲ್ಲಿ ಇದ್ದ ಕಾರಣ, ಈ ದಿನ ಸಂಬಂಧಿತ ಗಮಾಸ್ತ ರಜೆಯಲ್ಲಿ ಇರುವ ಕಾರಣ ಸದರಿ ದಾಗಿನುಗಳನ್ನು ತರಲು ಸಾಧ್ಯವಾಗದೇ ಇರುವ ಕಾರಣ ಮುಂದಿನ ಹಂತದ ವಿಚಾರಣೆನ್ನು ಮುಂದೂಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.11.24 10:59:35 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.